> **ಒಳ ಮನೆಯಲ್ಲಿ ಸೊಸೆಗೆ ಅಡಿಗೆಯ ನಿರ್ದೇಶನ ಕೊಟ್ಟ ಆ ಮನೆಯ ಗೃಹಿಣಿ ಹಜಾರಕ್ಕೆ ಬಂದು ಕುಳಿತುಕೊಳ್ಳುತ್ತಾ, ಬಂದಿದ್ದ ಹೆಂಗಸರ ಮೈ ಮೇಲಿನ ನಗನಟ್ಟುಗಳನ್ನು, ಉಟ್ಟಿದ್ದ ಕಾಂಚೀಪುರದ ಸೀರೆಗಳ ಜರ್ಬನ್ನು ಅಳತೆ ಹಾಕಿ ಇವರು ಶ್ರೀಮಂತರೆಂಬ ತೀರ್ಮಾನಕ್ಕೆ ಬಂದರು.**

ನಾವೊಂದು ನಿಯಮ ಮಾಡಿಕೊಂಡಿದೀವಿ. ಯಾರ ಮನೆಯಲ್ಲಿ ಸಾವು ಸಂಭವಿಸಿದರೂ, ಸತ್ಯನಾರಾಯಣ ಪೂಜೆ, ಮದುವೆ ಏನೇ ಆದರೂ... ಮನೆಗೊಂದು ತಲೆ ಕಡ್ಡಾಯವಾಗಿ ಬಂದು ಓಡಾಡಬೇಕು. ಅವರಿಗೆ ಬೇಕಾದ ಸಹಾಯ ಮಾಡಬೇಕು. ನಮ್ಮ ಸಂಸ್ಥೆಯ ಫಂಡಿನಿಂದ ಸಾವಿನ ಮನೆಗೆ ಒಂದು ಪರಿಹಾರ ಧನ ಅಂತ ಗೊತ್ತು ಮಾಡಿಕೊಂಡಿದ್ದೀವಿ. ದೊಡ್ಡ ಮನುಷ್ಯರಿರಬಹುದು ಸಾಧಾರಣದವರಿರಬಹುದು... ಎಲ್ಲರಿಗೂ ಸಮಾನ ಕಾನೂನು. ತೀರಾ ಅನಿವಾರ್ಯವಾದರೆ ಮಾತ್ರ ಮನೆಯಿಂದ ಯಾರೂ ಬರಲಾರದ ಸಂದರ್ಭದಲ್ಲಿ ತಪ್ಪಿಸಿಕೊಳ್ಳಬಹುದು. ಅದಕ್ಕೆ ಬದಲಾಗಿ ಸಂಘಕ್ಕೆ ನೂರು ರೂಪಾಯಿ ದಂಡ ಕಟ್ಟಬೇಕು. ಊರು ಅಂದ ಮೇಲೆ ಸಾವು ನೋವು ಇಲ್ಲದೇನಾ... ಊರಲ್ಲಿ ಯಾರ ಮನೇಲೇ ಸತ್ರೂ ಎಲ್ಲರ ಮನೆಯಿಂದ ಒಬ್ಬರೇನು ಎಲ್ಲರೂ ಬರೋರು. ನೀವೀಗ ಹೆಣ್ಣು ನೋಡಲು ಹೋಗ್ತಿದೀರಲ್ಲ... ಅದೇ ಸೋನಾರಿ ಶೆಟ್ರ ಮನೆ... ಅವರ ಮನೆಯನ್ನು ಹೊರತು ಪಡಿಸಿ ಯಾರೂ ತಪ್ಪಿಸಿಕೋತಾ ಇರಲಿಲ್ಲ. ತಮ್ಮ ಮನೆಯಿಂದ ಯಾರೊಬ್ಬರು ಬರಲಾಗಲಿಲ್ಲ ತಮಗೆ ಅನಾನುಕೂಲ, ಅನಾರೋಗ್ಯ ಅಂತ ಸುಳ್ಳು ನೆವ ಹೇಳಿ ಪ್ರತಿ ಬಾರಿಯೂ ನೂರು ರೂಪಾಯಿ ದಂಡ ಕಳಿಸೋರು. ಆ ಕಾಲದಲ್ಲಿ ನೂರು ರೂಪಾಯಿಗೆ ಬೆಲೆ ಇತ್ತು ಯಜಮಾನ್ರೆ. ಆದರೆ ಅನುಕೂಲವಂತರ ಮನೆ, ಅಡವಾಗಿ ಆಸ್ತಿ ಪಾಸ್ತಿ ಇದ್ದ ದೊಡ್ಡ ಕುಳ... ಆ ಅಹಂಕಾರದಲ್ಲಿ ಯಾವ ಕಡೆಗೂ, ಯಾರ ಮನೆಗೂ ಬರದೆ ನೂರು ರೂಪಾಯಿ ಕಳಿಸುವ ಪರಿಪಾಠ ಮಾಡಿಕೊಂಡು ಬಿಟ್ಟರು.

ಒಂದು ಸಾರಿ ಸೋನಾರಿ ಶೆಟ್ಟರಿಗೆ ಅದೇ ನೀವೀಗ ನೋಡಲು ಹೋಗ್ತೀರೋ ಆ ಹುಡುಗಿಯ ಅಜ್ಜನಿಗೆ ಬಹಳ ಕಾಯಿಲೆ. ಆಸ್ಪತ್ರೆಯಲ್ಲೇ ತೀರಿಕೊಂಡರು. ವಯಸ್ಸೂ ಆಗಿತ್ತು ಅನ್ನಿ. ಸರಿ ಮನೆಗೆ ಹೆಣ ತಂದರು, ನೆಂಟರಿಷ್ಟರು ಇನ್ನು ಯಾರು ಬಂದಿರಲಿಲ್ಲ. ಆಂಬುಲೆನ್ಸ್‌ನಿಂದ ಹೆಣ ಇಳಿಸೋಕೂ ಒಬ್ಬರೂ ಇರಲಿಲ್ಲ. ಆ ದುಃಖದಲ್ಲೂ ಆ ಯಮ್ಮ... ಅಂದ್ರೆ ಅವ್ರ ಹೆಂಡ್ತಿ, ಮಗ, ಸೊಸೇನೇ ಹೆಣ ಇಳಿಸಿ ಜಗಲೀಲಿ ಮಲಗಿಸಿದರು. ಚಟ್ಟ ಕಟ್ಟಕ್ಕೂ ಯಾರೂ ಬರಲಿಲ್ಲ. ನಾನು ಹೋಗಲಿಲ್ಲ ಅಂತಿಟ್ಕೊಳಿ. ಹೋಗೋಕೆ ನಮ್ಮ ಸಂಘದ ಎಲ್ಲರೂ ತಡೆದು ಬಿಟ್ಟರು; ಅದು ತುಂಬಾ ಅಮಾನವೀಯ ಅಂತ ನಂಗೆ ಅವತ್ತು ಅನ್ನಿಸಿತು. ಇವತ್ತು ಹಾಗೇ ಅನ್ನಿಸುತ್ತೆ. ಮುಂದಿನ ದಿನಗಳಲ್ಲಿ ಈ ವಿಷಯವಾಗಿ ನಾನವರ ಕ್ಷಮೆಯನ್ನು ಕೇಳಿದ್ದೆ. ಆದರೆ ಅವರು ಕ್ಷಮಿಸಲೇ ಇಲ್ಲ. 'ಯಾರು ಏನು ಹೇಳಿದ್ರು ನೀವು ಬರಬೇಕಿತ್ತು. ಅವರೇನು ನಿಮ್ಮ ತಲೆ ತೆಗೆದು ಬಿಡೋರೆ' ಅಂದು ಬಿಟ್ರು ಅಂತ ಹೇಳಿ ಮಾತು ನಿಲ್ಲಿಸಿದರು. ಬಂದಿದ್ದ ಗಂಜಾಂ ಸಾಹುಕಾರರು 'ಅವರು ನಿಮ್ಮ ಮನೆ ಕಾರ್ಯಗಳಿಗೆ ಬರುತ್ತಿದ್ದರ?' ಎಂದು ಕೇಳಿದಾಗ ಶೆಟ್ಟರು ಇಲ್ಲವೆನ್ನುವಂತೆ ತಲೆಯಲುಗಿಸಿದರು. 'ಸರಿ ಬಿಡಿ ನಿಮ್ಮದೇನು ತಪ್ಪಿಲ್ಲ. ಅವರು ಬಂದು ನೀವು ಹೋಗದಿದ್ದರೆ ಮಾತು ಬೇರೆ ಇರುತ್ತಿತು. ಅವರೂ ಬಂದಿಲ್ಲ, ನೀವು ಹೋಗಲಿಲ್ಲ... ಗಾದೆನೇ ಇಲ್ವ? ನೀನನಗಿದ್ದರೆ ನಾ ನಿನಗೆ ಅಂತ' ಅಂದರು. ಶೆಟ್ಟರು ಸಾವರಿಸಿಕೊಂಡು 'ಮುಯ್ಯಿ ತೀರಿಸಿಕೊಳ್ಳೋದು ವ್ಯವಹಾರದಲ್ಲಿ ಸರಿ, ಮಾನವಿಯತೆಯಲ್ಲಿ ಅಂತದ್ದು, ಬರಬಾರದು ಅದೂ ಸಾವಿನಲ್ಲಿ' ಅಂದಾಗ